R.W.1

**<u>ಸಾಕ್ಷಿಯನ್ನು ದಿನಾಂಕಃ 01-04-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಡಿಕ್ರಿದಾರ ಪರ ವಕೀಲರಿಂದ</u>**

1. ದಾವಾ ಅಸ್ತಿಯನ್ನು ಡಿಕ್ರಿದಾರರಿಗೆ ಸರ್ಕಾರದವರು ಪಟ್ಟಾ ನೀಡಿದ್ದರು ಅಂದರೆ ಸರಿ. ನಾನು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಡಿಕ್ರಿದಾರರಿಗೆ ತೊಂದರೆ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನ್ಯಾಯಾಲಯದ ಆದೇಶದ ನಂತರವೂ ಕೂಡ ದಾವಾ ಸ್ವತ್ತಿನಲ್ಲಿ ತಪ್ಪಿ ಗುಂಡಿಗಳನ್ನು ಹಾಕಲು ಪ್ರಯತ್ನಿಸಿದ್ದು ಆ ಮೂಲಕ ಆದೇಶವನ್ನು ಉಲ್ಲಂಘಸಿದ್ದೇನೆ ಅಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯು ಮನೆ ಕಟ್ಟುವಾಗ ನಾನು ತಕರಾರು ಮಾಡಿದ್ದೇನೆ ಅಂದರೆ ಸರಿಯಲ್ಲ. ವಾದಿಯ ಹಕ್ಕು ಮತ್ತು ಸ್ವಾಧೀನದತೆಗೆ ನಾನು ನ್ಯಾಯಾಲಯದ ಆದೇಶ ಉಲ್ಲಂಘಿಸಿ ತೊಂದರೆ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**